ಈ ಪ್ರಕರಣದ ಫಿರ್ಯಾದುದಾರರು ಮತ್ತು ಆರೋಪಿತರು ಭಾರತೀಯ ನಾಗರೀಕ ಸುರಕ್ಷಾ ಸಂಹಿತ ಕಲಂ ೫೦೩ ರಡಿಯಲ್ಲಿ ಸಲ್ಲಿಸಿರುವ ಪ್ರತ್ಯೇಕ ಅರ್ಜಿಗಳ ಮೇಲೆ ಆದೇಶ

ಗುಬ್ಬಿ ಪೊಲೀಸ್ ಠಾಣಾ ತನಿಖಾಧಿಕಾರಿಗಳು ಆರೋಪಿತರ ವಿರುದ್ಧ ಭಾರತ ನ್ಯಾಯ ಸಂಹಿತೆ ಕಲಂ ೩೨೯(೩), ೧೧೫(೨), ೩೫೧(೨) ರ ರೀತ್ಯಾ ಈ ದೋಷಾರೋಪಣಾ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಗುಬ್ಬಿ ತಾಲ್ಲೂಕು ಗುಬ್ಬಿ ಪೊಲೀಸ್ ಠಾಣಾ ವ್ಯಾಪ್ತಿಯ ದಿಂಡಿಗದಹಳ್ಳಿ ಗ್ರಾಮದ ಸರ್ವೆ ನಂ. ೧೧/೧ ರಲ್ಲಿನ ೧.೦೭ ಗುಂಟೆ ಜಮೀನಿನ ಖಾತೆ ಪಹಣಿ ಹೊಂದಿರುವ ಸಾಕ್ಷಿ ೧ ಶಿವಲಿಂಗಯ್ಯರವರು ತನ್ನ ಜಮೀನಿನಲ್ಲಿ ಬೋರ್ ಕೊರೆಸಿ ಸ್ಟಾರ್ಟರ್, ಮೇನ್ಸ್ ವೈರ್ ಅಳವಡಿಸಿದ್ದನ್ನು ಆರೋಪಿತರು ದಿನಾಂಕ: ೦೨.೦೨.೨೦೨೬ ರಂದು ೮.೩೦ ರ ಸಮಯದಲ್ಲಿ ಸದರಿ ಜಮೀನಿಗೆ ಅಕ್ರಮ ಪ್ರವೇಶಮಾಡಿ ಸಾಕ್ಷಿ ರವರು ಅಳವಡಿಸಿದ್ದ ಸ್ಟಾರ್ಟರ್, ಮೇನ್ಸ್ ವೈರ್ ಬಿಚ್ಚಿರುವುದನ್ನು ಕಂಡು ಸಾಕ್ಷಿ ೧ ರವರು ಕೇಳಿದ್ದಕ್ಕೆ ಈ ಜಮೀನು ನನ್ನದು, ಏನು ಮಾಡುತ್ತೀಯಾ ಮಾಡಿಕೋ ನನ್ನ ಹತ್ತಿರ ಬಂದರೆ ನಿನ್ನನ್ನು ಕೊಚ್ಚಿ ಹಾಕುತ್ತೇನೆ ಎಂದು ತನ್ನ ಕೈಯ್ಯಲ್ಲಿದ್ದ ರೋಟಿ ಕುಡುಗೋಲನ್ನು ತೋರಿಸಿ ಪ್ರಾಣ ಬೆದರಿಕೆ ಹಾಕಿರುವುದು ಮತ್ತು ಕೈಯಿಂದ ಕುತ್ತಿಗೆಗೆ ಗುದ್ದಿ ನೋವುಂಟು ಮಾಡಿರುವುದಾಗಿ ತಿಳಿಸಲಾಗಿದೆ.

೨. ಪ್ರಸ್ತುತ ಪ್ರಕರಣದಲ್ಲಿ ಆರೋಪಿತರು ಜಾಮೀನು ಪಡೆದಿದ್ದು, ಸಾಕ್ಷಿ ೧ ಶಿವಲಿಂಗಯ್ಯ ಮತ್ತು ಆರೋಪಿತರಾದ ದೇವರಾಜು ರವರು ನಾಗರೀಕ ಸುರಕ್ಷಾ ಸಂಹಿತಾ ಕಲಂ ೫೦೩ ರಡಿಯಲ್ಲಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಿದ್ದು, ಅವುಗಳಲ್ಲಿ, ಈ ಪ್ರಕರಣದಲ್ಲಿ ತನಿಖಾಧಿಕಾರಿಗಳು ವಶಪಡಿಸಿಕೊಂಡಿರುವ ಸ್ಟಾರ್ಟರ್, ಮೇನ್ಸ್ ವೈರ್ ತನಗೆ ಸೇರಿದ್ದೆಂದು, ಆದುದರಿಂದ ಅದನ್ನು ತನ್ನ ಮಧ್ಯಂತರ ವಶಕ್ಕೆ ನೀಡಬೇಕೆಂದು ಕೋರಿದ್ದಾರೆ.

೩. ಪ್ರಸ್ತುತ ಅರ್ಜಿಗಳಿಗೆ ಸಂಬಂಧಿಸಿ ಪ್ರಾಜ್ಞ ಸಹಾಯಕ ಅಭಿಯೋಜಕರು ತಮ್ಮ ತಕರಾರು ಸಲ್ಲಿಸಿದ್ದಾರೆ. ಅಲ್ಲದೆ, ಆರೋಪಿತರು ಸಾಕ್ಷಿ ೧ ರವರ ಈ ಅರ್ಜಿಗೆ ತಮ್ಮ ತಕರಾರನ್ನು ಸಲ್ಲಿಸಿರುತ್ತಾರೆ. ತನಿಖಾಧಿಕಾರಿಗಳು ತಮ್ಮ ವರದಿಯನ್ನು ಸಲ್ಲಿಸಿದ್ದು, ಅದರೊಡನೆ ಫಿರ್ಯಾದಿಯು ಹಾಜರುಪಡಿಸಿದ್ದಾರೆನ್ನಲಾದ ಶ್ರೀ ಬೈರವೇಶ್ವರ ಹಾರ್ಡ್‌ ವೇರ್ ರವರು ದಿನಾಂಕ: ೦೫.೧೦.೨೦೨೩ ರಂದು ನೀಡಿದ್ದಾರೆಂದು ಹೇಳಿರುವ ಬಿಲ್ ನ ನೋಟರಿ ಪ್ರಮಾಣಿತ ಪ್ರತಿಯೊಂದನ್ನು ಹಾಜರುಪಡಿಸಿದ್ದಾರೆ.

೪. ಇದಕ್ಕೆ ವಿರುದ್ಧವಾಗಿ, ಆರೋಪಿತರ ಪರ ವಕೀಲರು ದಿನಾಂಕ: ೨೩.೦೭.೨೦೧೯ ರಂದು ಶ್ರೀ ನಂದಿ ಎಂಟರ್ ಪ್ರೈಸರ್ಸ್ ರವರು ನೀಡಿರುವ ಬಿಲ್ಲೊಂದರ ನೋಟರಿ ಪ್ರಮಾಣಿತ ಪ್ರತಿಯನ್ನು ಹಾಜರುಪಡಿಸಿದ್ದಾರೆ.

೫. ಎರಡೂ ಪಕ್ಷಕಾರರ ವಾದ ವಿವಾದವನ್ನು ಆಲಿಸಲಾಯಿತು.

೬. ಈ ಹಂತದಲ್ಲಿ, ಸದರಿ ಮೋಟರ್ ಮತ್ತು ಮೇನ್ಸ್ ವೈಯರನ್ನು ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿಲ್ಲದ ಕಾರಣ, ಮತ್ತು ಪಿ.ಎಫ್. ನಲ್ಲಿ ಸದರಿ ಮೋಟರ್ ನ ಇತರೆ ವಿವರಗಳನ್ನು ಸಂಪೂರ್ಣವಾಗಿ ನಮೂದಿಸಿಲ್ಲದ ಕಾರಣ, ಮತ್ತು ಪ್ರಸ್ತುತ ಪ್ರಕರಣವು ದೋಷಾರೋಪಣೆಯನ್ನು ದಾಖಲಿಸಿಕೊಳ್ಳುವ ಹಂತದಲ್ಲಿದ್ದು, ಸಾಕ್ಷಿ ೧ ರವರ ವಿಚಾರಣೆಯ ಸಮಯ ಸದರಿ ಸ್ಟಾರ್ಟರ್ ಮತ್ತು ಮೇನ್ಸ್ ವಯರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಸಮಯ ಅದನ್ನು ಸೂಕ್ತ ರೀತಿಯಲ್ಲಿ ಪರಿಶೀಲಿಸಿ, ಈ ಅರ್ಜಿಗಳ ಸಂಬಂಧ ಸೂಕ್ತ ಆದೇಶ ನೀಡಬಹುದಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ವಶಪಡಿಸಿಕೊಂಡಿರುವ ಸ್ಟಾರ್ಟರ್ ಮತ್ತು ವಯರ್ ತಮ್ಮದೆಂದು ಎರಡೂ ಪಕ್ಷಕಾರರು ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಿರುವ ಕಾರಣ, ಈ ಹಂತದಲ್ಲಿ ಈ ಅರ್ಜಿಯನ್ನು ವಿಲೇಮಾಡಲು ಅಗತ್ಯವಿರುವ ಸೂಕ್ತ ದಾಖಲಾತಿಗಳನ್ನು ಪಕ್ಷಕಾರರು ಒದಗಿಸಿಲ್ಲವೆಂದು ಆ ಕಾರಣ, ಈ ಅರ್ಜಿಯನ್ನು ಇತ್ಯರ್ಥಕ್ಕೆ ಬಾಕಿ ಇಡುವುದು ಸೂಕ್ತವೆಂದು ಕಂಡುಬಂದ ಹಿನ್ನೆಲೆಯಲ್ಲಿ, ಈ ಕೆಳಕಂಡಂತೆ ಆದೇಶ:

**-:ಆದೇಶ:-**

- ಫಿರ್ಯಾದಿ ಮತ್ತು ಆರೋಪಿತರು ಭಾರತೀಯ ನಾಗರೀಕ ಸುರಕ್ಷಾ ಸಂಹಿತಾ ಕಲಂ ೫೦೩ ರಡಿಯಲ್ಲಿ ಸಲ್ಲಿಸಿರುವ ಪ್ರತ್ಯೇಕ ಅರ್ಜಿಗಳನ್ನು ಫಿರ್ಯಾದಿಯ ಸಾಕ್ಷಿ ವಿಚಾರಣೆಯ ಮುಕ್ತಾಯದ ಹಂತದವರೆವಿಗೂ ಇತ್ಯರ್ಥಕ್ಕೆ ಬಾಕಿ ಇರಿಸಲಾಗಿದೆ.
- ಆರೋಪಿತರ ಮೇಲಿನ ದೋಷಾರೋಪಣೆಯ ಸಂಬಂಧ ವಾದ ಸುನಾವಣೆಗಾಗಿ ದಿನಾಂಕ: ೧೭.೦೮.೨೦೨೬ ರಂದು ಕರೆಯತಕ್ಕದ್ದು.

Sd/-

(ಅನುಪಮ.ಡಿ )

ಪ್ರಧಾನ ಹಿರಿಯ ಸಿ ವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ